**ಸಿ.ಸಿ.ನಂ.: 713/2024**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **04-08-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು –ಆರೋಪಿ ಪರ ಶ್ರೀ. ರಂಜನ ನಾಯ್ಕು ವಕೀಲರಿಂದ</u>**

1. ನಾನು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿದ್ದೇನೆ. ನನ್ನ ವಾರ್ಷಿಕ ಆದಾಯ ರೂ. 8 ಲಕ್ಷ ಹೊಂದಿದ್ದು ಈ ಕುರಿತು ಜಿ.ಎಸ್.ಟಿ. ಪಾವತಿ ಮಾಡುತ್ತೇನೆ. ನಾನು 2019 ರಿಂದ ಜಿ.ಎಸ್.ಟಿ. ಯನ್ನು ಪಾವತಿ ಮಾಡುತ್ತಿದ್ದೇನೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ನಾನು 2020 ರಿಂದ ಆದಾಯ ತೇರಿಗೆಯನ್ನು ಪಾವತಿ ಮಾಡುತ್ತಿದ್ದೇನೆ. ನಾನು ವರ್ಷದಲ್ಲಿ ಎಷ್ಟು ಆದಾಯ ತೇರಿಗೆಯನ್ನು ಕಟ್ಟುತ್ತೇನೆ ಎಂದರೆ ಸಾಕ್ಷಿಯು ಸರಕಾರದವರು ಕಟ್ ಮಾಡುತ್ತೇವೆ ಎಂದು ನುಡಿ ಯುತ್ತಾರೆ. ಸಾಕ್ಷಿಯು ಮುಂದುವರಿದು ನನಗೆ ಬರುವ ಬಿಲ್ಲಿನಲ್ಲಿ ಈ ಕುರಿತು ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ವಾರ್ಷಿಕ ಆದಾಯದ ತೇರಿಗೆಯನ್ನು ವಕೀಲರು ನೋಡಿಕೊಳ್ಳುತ್ತಾರೆ.

2. ನಾನು ನನ್ನ ಫಿರ್ಯಾದಿಯಲ್ಲಿ ನಮೂದಿಸಿದ ಹಣವನ್ನು ನನ್ನ ಆದಾಯ ತೇರಿಗೆಯಲ್ಲಿ ತೋರಿಸಿರುವುದಿಲ್ಲ. ನಾನು ಫಿರ್ಯಾದಿಯಲ್ಲಿ ನಮೂದಿಸಿದ ಹಣವನ್ನು ನನ್ನ ಕೆಲಸದ ಆಳುಗಳಿಗೆ ನೀಡಲು ಹಾಗೂ ನನ್ನ ಕೆಲಸಕ್ಕೆ ಸಂಬಂಧಿಸಿದ ಉಪಕರಣಗಳನ್ನು ಖರೀದಿಸುವ ಸಲುವಾಗಿ ನಾನು ಮನೆಯಲ್ಲಿ ಇಟ್ಟಂತಹ ಹಣವಾಗಿರುತ್ತದೆ. ಸದ್ರಿ ಬ್ಯಾಂಕನ್ನು ನಾನು ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಗೋಕರ್ಣ ಶಾಖೆಯಿಂದ ನೀಡಿರುತ್ತೇನೆ. ಸದ್ರಿ ಹಣವನ್ನು ಯಾವಾಗ ಬ್ಯಾಂಕಿನಿಂದ ತಂದಿದ್ದೇನೆ ಎಂದು ನನಗೆ ನೆನಪಿಲ್ಲ. ನನ್ನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗೋಕರ್ಣ ಶಾಖೆಯ ಖಾತೆಯ ಉತಾರನ್ನು

ನೋಡಿದರೆ ಸದ್ರಿ ಹಣವನ್ನು ನಾನು ಯಾವಾಗ ತೆಗೆದುಕೊಂಡು ಬಂದಿದ್ದೇನೆ ಎಂದು ತಿಳಿಯುತ್ತದೆ ಎಂದರೆ ಸರಿ. ಸದ್ರಿ ಖಾತೆಯ ಉತಾರನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಫಿರ್ಯಾದಿಯಲ್ಲಿ ನಮೂದಿಸಿದ ಹಣವು ನನ್ನ ಖಾತೆ ಉತಾರ ತೋರಿಸಿದರೆ ತಿಳಿಯುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಕರ್ನಾಟಕ ಬ್ಯಾಂಕ್, ಕೆನರಾ ಬ್ಯಾಂಕ, ಸಿಂಡಿಕೇಟ ಬ್ಯಾಂಕಗಳಲ್ಲಿ ಖಾತೆಯನ್ನು ಹೊಂದಿದ್ದು, ನಾನು ನನ್ನ ಕೆಲಸಗಾರರಿಗೆ ಹಣವನ್ನು ನೀಡುವ ಸಲುವಾಗಿ ಹಣವನ್ನು ಇಟ್ಟುಕೊಂಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತೇನೆ. ನಾನು ಕರ್ನಾಟಕ ಬ್ಯಾಂಕ್, ಕೆನರಾ ಬ್ಯಾಂಕ, ಸಿಂಡಿಕೇಟ ಬ್ಯಾಂಕಗಳ ಉತಾರನ್ನು ನೋಡಿದಾಗ ಫಿರ್ಯಾದಿಯಲ್ಲಿ ನಮೂದಿಸಿದ ಹಣದ ಬಗ್ಗೆ ತಿಳಿಯುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಬ್ಯಾಂಕಗಳ ಖಾತೆಯ ಉತಾರನುನ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**3.** ನಾನು ರೂ. 4 ಲಕ್ಷ ಹಣವನ್ನು 500 ಮುಖಬೆಲೆಯ ನೋಟನ್ನು ತಂದಿರುತ್ತೇನೆ. ನಾನು ಸದ್ರಿ 4 ಲಕ್ಷ ರೂಪಾಯಿಯ 500 ಮುಖ ಬೆಲೆಯ ನೋಟನ್ನು ಆರೋಪಿತರಿಗೆ ನೀಡಿರುತ್ತೇನೆ. ನಾನು 4 ಲಕ್ಷ ಹಣವನ್ನು 500 ರೂಪಾಯಿ ಮುಖಬೆಲೆಯಲ್ಲಿ ಲೆಕ್ಕ ಹಾಕುತ್ತೇನೆ. ನಾನು ಆರೋಪಿತನಿಗೆ ಹಣವನ್ನು ನೀಡುವ ಸಂದರ್ಭದಲ್ಲಿ ನಾನು ಹಾಗೂ ಆರೋಪಿತನು ಇಬ್ಬರೇ ಇದ್ದೇವು. ಆರೋಪಿತನಿಗೆ ನಾವು ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇವೆ. ನಾನು ಆರೋಪಿತನು ನಮ್ಮ ಪಕ್ಕದ ಮನೆಯವರಾಗಿರುವುದರಿಂದ ವಿಶ್ವಾಸದ ಮೇಲೆ ಆತನಿಗೆ ಹಣವನ್ನು ನೀಡಿರುತ್ತೇನೆ. ಆದ್ದರಿಂದ ಹಣವನ್ನು ನೀಡುವ ಸಂದರ್ಭದಲ್ಲಿ ಯಾವುದೇ ಗೆಳೆಯರು ಹಾಗೂ ಸಂಬಂಧಿಕರ ಮುಂದೆ

**ಸಿ.ಸಿ.ನಂ.: 713/2024**

ಪಿ.ಡಬ್ಲ್ಯೂ:1

ನೀಡಿರುವುದಿಲ್ಲ. ಆರೋಪಿತನು ನನ್ನ ಮುಂದೆ ಹಣವನ್ನು ಕೇಳಿದ್ದು, ಮಾರನೇಯ ದಿನ ನಾನು ಹಣವನ್ನು ನೀಡಿರುತ್ತೇನೆ.ಸಿ

**4.** ನಮ್ಮ ಮನೆಯ ಸುತ್ತಮೂತ್ತಲೂ 20 ಮನೆಗಳು ಇವೆ. ನಮ್ಮ ಮನೆಯ ಸುತ್ತ ಮೂತ್ತಲೂ ಚಂದ್ರು ಅಂಬಿಗ ರವರೂ ಸಹ ಇದ್ದಾರೆ. ಆರೋಪಿತನು ನನ್ನ ಸ್ನೇಹಿತನಾಗಿರುವುದರಿಂದ ಆತನು ನನಗೆ ಹಣವನ್ನು ವಾಪಸ್ಸು ಕೊಡುತ್ತಾನೆ ಎಂಬ ವಿಶ್ವಾಸದಿಂದ ಆತನಿಗೆ ಹಣವನ್ನು ನೀಡಿರುತ್ತೇನೆ. ಆರೋಪಿತನ ತಂದೆ 4 ವರ್ಷದ ಹಿಂದೆ ಮೃತರಾಗಿರುತ್ತಾರೆ. ಆರೋಪಿತನ ಸಹೋದರನೂ ಸಹ ಮೃತನಾಗಿರುತ್ತಾನೆ. ಆರೋಪಿತರು ಕಡು ಬಡತನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನು ವಾಹನದಲ್ಲಿ ಮೀನು ವ್ಯಾಪಾರವನ್ನು ಮಾಡುತ್ತಾನೆ, ಸಾಕ್ಷಿಯು ಮುಂದುವರಿದು ಆತನ ಅಮ್ಮ ಹಾಗೂ ಅಕ್ಕಳು ಸಹ ಮೀನು ವ್ಯಾಪಾರ ಮಾಡುತ್ತಾರೆ. ಸಾಕ್ಷಿಯು ಮುಂದುವರಿದು ಅವರು ಟಾಟಾ ಎಸ್ ವಾಹನದಲ್ಲಿ ಮೀನು ವ್ಯಾಪಾರವನ್ನು ಮಾಡುತ್ತಾರೆ ಎಂದು ನುಡಿಯುತ್ತಾರೆ.

**5.** ನನ್ನ ಫಿರ್ಯಾದಿಯಲ್ಲಿ ನಮೂದಿಸಿದಂತೆ ಆರೋಪಿತನು ಚಾಲಕ ವೃತ್ತಿಯನ್ನು ಮಾಡುತ್ತಾನೆ. ಆರೋಪಿತನ ಪಡಿತರ ಚೀಟಿ ಬಿ.ಪಿ.ಎಲ್ ಎಂದರೆ ಸಾಕ್ಷಿಯು ಗೊತ್ತಿಲ್ಲ ಇರಬಹುದು ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಹೆ.ಪ್ರ.ದ.ನ್ಯಾ.ದಂ. ಕುಮಟಾ